## ಮೌಲ್ಯವಂತ ಜೀವನ




ಒಬ್ಬ ಬಾಲಕನು ಆಕಸ್ಮಿಕವಾಗಿ ಒಂದು ಬಾವಿಗೆ ಬಿದ್ದುಬಿಟ್ಟನು. ಸಹಾಯಕ್ಕಾಗಿ ಜೋರಾಗಿ ಕೂಗಿಕೊಂಡನು. ದಾರಿಯಲ್ಲಿ ಹೋಗುತ್ತಿದ್ದ ಸಾಧುವೊಬ್ಬನಿಗೆ ಅವನ ಕೂಗು ಕೇಳಿಸಿತು. ಅವನು ಧ್ವನಿ ಬಂದ ಕಡೆ ಹೋದನು.

ಬಾವಿಯಲ್ಲಿ ಇಣುಕಿ ನೋಡುತ್ತಾನೆ, ಬಾಲಕನು ಇನ್ನೇನು ಸಾಯುವ ಸ್ಥಿತಿಯಲ್ಲಿದ್ದಾನೆ. ಕೂಡಲೆ ಸಾಧುವು ಹಿಂದೆ ಮುಂದೆ ನೋಡದೆ ಬಾವಿಯೊಳಗೆ ಇಳಿದು ಬಾಲಕನನ್ನು ಮುಳುಗುವುದರಿಂದ ಪಾರುಮಾಡಿದ. ದೇಹದೊಳಗೆ ಸೇರಿಕೊಂಡಿದ್ದ ನೀರನ್ನು ಹೊರತೆಗೆದು, ಅವನನ್ನು ಉಪಚರಿಸಿದನು.

ಬಾಲಕನು ಸ್ವಲ್ಪ ಚೇತರಿಸಿಕೊಂಡು ಮೇಲೆದ್ದ ಕೂಡಲೇ ಸಾಧು ಮುಂದಕ್ಕೆ ಹೊರಟನು. ಬಾಲಕನು, "ನಿಮಗೆ ತುಂಬ ಧನ್ಯವಾದಗಳು" ಎಂದು ಹೇಳಿದ. "ಯಾತಕ್ಕಾಗಿ?" ಸಾಧು ವಿಚಾರಿಸಿದ. "ನನ್ನನ್ನು ರಕ್ಷಿಸಿದ್ದಕ್ಕಾಗಿ" ಬಾಲಕನು ಉತ್ತರಿಸಿದ. ಸಾಧು ಬಾಲಕನನ್ನೇ ದಿಟ್ಟಿಸಿ ನೋಡುತ್ತ ಹೇಳಿದ : "ನೋಡು, ನೀನು ಮುಂದೆ ರಕ್ಷಿಸಲು ಯೋಗ್ಯವಾದ ಜೀವನವನ್ನು ನಡೆಸಬೇಕು." ◆